2019 ಕ.ತೀ.ವ 1742

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಬಿ.ಆರ್. ವಿಜಿಬೋವಿ –ವಿರುದ್ಧ– ವ್ಯವಸ್ಥಾಪಕರು, ನ್ಯಾಷನಲ್ ವಿಮಾ ಕಂ. ನಿಯಮಿತ ಮತ್ತು ಮತ್ತೊಬ್ಬರು*

ಮೋಟಾರು ವಾಹನಗಳ ಅಧಿನಿಯಮದ 173(1)ನೇ ಪ್ರಕರಣದ ಮೇರೆಗಿನ ಸಂಕೀರ್ಣ ಮೊದಲ ಅಪೀಲು.

ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಾಂಶಗಳನ್ನು ಮತ್ತು ತನ್ನ ನಿವೇದನೆಯಲ್ಲಿ ಉಲ್ಲೇಖಿಸಿದ ಪೂರಕವಾದ ನಿರ್ಣಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಪರಾಮರ್ಶಿಸಿದಾಗ ಅಪೀಲುದಾರರ ಮಾನ್ಯ ನ್ಯಾಯವಾದಿಗಳ ವಾದಾಂಶದಲ್ಲಿ ಸಾಕಷ್ಟು ಹುರುಳಿರುವುದು ನನಗೆ ಕಂಡು ಬರುತ್ತದೆ. ನ್ಯಾಯಾಧಿಕರಣವು ನಷ್ಟ ಪರಿಹಾರಕ್ಕೆ ಅಪೀಲುದಾರನ ಶೇಕಡವಾರು ಅಂಗವೈಕಲ್ಯತೆಯನ್ನು ಮತ್ತು "ನಷ್ಟವಾದ ಭವಿಷ್ಯ ಆದಾಯ" ಪರಿಗಣಿಸದಿರುವುದು ನ್ಯೂನ್ಯತೆಯಾಗಿ ಇಲ್ಲಿ ನನಗೆ ಕಂಡುಬರುತ್ತದೆ. ವೈದ್ಯರು ಅಪೀಲುದಾರನ ಅಂಗವೈಕಲ್ಯತೆಯೂ ಶೇಕಡಾ 80ರಷ್ಟಿದೆ ಎಂದು ನಿರ್ಧರಿಸಿರುವರು, ನನಗೆ ಇಲ್ಲಿ ಅಪೀಲುದಾರನ ಇಡೀ ದೇಹದ ಅಂಗವೈಕಲ್ಯತೆಯೂ ಶೇ.60ರಷ್ಟಾಗಿದೆ ಎಂದು ಕಂಡು ಬರುತ್ತದೆ. ಇದರ ಜೊತೆಯಲ್ಲಿ 'ನಷ್ಟವಾದ ಭವಿಷ್ಯದ ಆದಾಯುದ ಸಂಬಂಧದಲ್ಲಿ ನಷ್ಟ ಪರಿಹಾರವನ್ನು ಪರಾಮರ್ಶಿಸಬೇಕಾಗಿದೆ. ಅಲ್ಲದೆ, ಅಪೀಲುದಾರನ ಆದಾಯದ ಸಂಬಂಧದಲ್ಲಿ ಅಂಗೀಕರಿಸುವಂತಹ ಸಾಕ್ಷ್ಯವು ಇರುವುದಿಲ್ಲ. ಅಪಘಾತವು 2011ರಲ್ಲಿ ಸಂಭವಿಸಿದೆ. ಈ ಸಂಬಂಧದಲ್ಲಿ ಲೋಕ ಅದಾಲತ್ ಇತ್ಯರ್ಥಪಡಿಸುವುದಕ್ಕಾಗಿ ಮಾನದಂಡಸೂತ್ರಗಳನ್ನು ಅನ್ವಯಿಸಿಕೊಂಡಿದೆ. ಆ ಪ್ರಕಾರದಂತೆ ಅಪೀಲುದಾರರ

*ಎಂ.ಎಫ್.ಎ. ಸಂಖ್ಯೆ: 2485/2013 (ಎಂವಿ), ದಿನಾಂಕ 19ನೇ ಜೂನ್, 2019.

ಮಾಸಿಕ ಆದಾಯವು 6,000/– ರೂಪಾಯಿಗಳಾಗಿದೆ ಎಂದು ನಾನು ಇಲ್ಲಿ ನಿರ್ಣಯಿಸಿರುತ್ತೇನೆ.

ಆದುದರಿಂದ ಗಾಯಾಳುವಿನ ಆದಾಯವು 6,000/– ರೂಪಾಯಿಗಳಾಗಿದೆ ಮತ್ತು ಅಂಗವೈಕಲ್ಯತೆಯೂ ಶೇ.60ರಷ್ಟು ಆಗಿರುತ್ತದೆ. ನ್ಯಾಯಾಧಿಕರಣವು ಅನ್ವಯಿಸಿಕೊಂಡ ಗುಣಾಂಕವಾದ 10ರೊಂದಿಗೆ ಶೇ.60 ಹಾಗೂ 6,000/– ರೂ.ಗಳನ್ನು ಗುಣಿಸಿದಾಗ ನಷ್ಟ ಪರಿಹಾರ ನಷ್ಟವಾದ ಭವಿಷ್ಯದ ಆದಾಯವಾದ 7,77,600/– ರೂಪಾಯಿಗಳು ಬರುತ್ತದೆ. (6000 x 12 x 18 x 60/100)

ಮುಂದುವರೆದು, ನಾನು ಹೆಚ್ಚುವರಿ ನಷ್ಟ ಪರಿಹಾರವಾಗಿ, ಚಿಕಿತ್ಸೆಯ ಕಾಲಾವಧಿಯಲ್ಲಿ ನಷ್ಟವಾದ ಆದಾಯವಾಗಿ 5,000/– ರೂಪಾಯಿಗಳನ್ನು ನೀಡಲು ಈ ಮೂಲಕ ನೀಡಲು ಆದೇಶಿಸುತ್ತೇವೆ.

ಅಪೀಲುದಾರನು ತನ್ನ ಬದುಕಿನ ಎಲ್ಲಾ ಸಂತೋಷ ಮತ್ತು ಸೌಕರ್ಯಗಳನ್ನು ಅಪಘಾತದ ನಂತರದಲ್ಲಿ ಕಳೆದುಕೊಂಡಿರುತ್ತಾನೆ ಅವನ ಎಡಗಾಲಿನ ಮಂಡಿಯ ಕೆಳಭಾಗವನ್ನು ಕಳೆದುಕೊಂಡಾಗ ಅಪೀಲುದಾರರಿಗೆ ಆಗಿರುವ ಅನಾನುಕೂಲವನ್ನು ಊಹಿಸಲು ಕಷ್ಟಕರವೆನ್ನಬಹುದು. ಈ ಲೆಕ್ಕ ಶೀರ್ಷಿಕೆಯಲ್ಲಿ ನ್ಯಾಯಾಧಿಕರಣವು 'ಸೌಕರ್ಯಗಳ ನಷ್ಟ' ಶೀರ್ಷಿಕೆಯಲ್ಲಿ 10,000/– ರೂಪಾಯಿಗಳನ್ನು ನಷ್ಟಪರಿಹಾರವನ್ನು ನಿರ್ಣಯಿಸಿರುವುದು ನನಗೆ ಕಂಡು ಬಂದಿದೆ. ಇದು ತುಂಬಾ ಅತ್ಯಲ್ಪವಾದ ನಷ್ಟಪರಿಹಾರವಾಗಿದೆ. ಆದುದರಿಂದ ನಾನು ಈ ಮೂಲಕ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ಇನ್ನು 10,000/– ರೂಪಾಯಿಗಳನ್ನು ಈ ಮೂಲಕ ಹೆಚ್ಚಿಸುತ್ತಿದ್ದೇನೆ. ಅಲ್ಲದೆ ಅಪೀಲುದಾರನ ಭವಿಷ್ಯದ ಉದ್ದೇಶಗಳಾಗಿ 50,000/–ಗಳನ್ನು ನೀಡುವುದು ನ್ಯಾಯಸಮ್ಮತವಾಗಿದೆ ಎಂಬುದು ನನಗೆ ಕಂಡು ಬರುತ್ತವೆ. ಆದುದರಿಂದ ತದನುಸಾರವಾಗಿ ಅವುಗಳನ್ನು ಮಂಜೂರು ಮಾಡಲು ಆದೇಶಿಸಿರುತ್ತೇನೆ. ಆದಾಗ್ಯೂ, ನ್ಯಾಯಾಧಿಕರಣವು ಮಂಜೂರು ಮಾಡಿದ ನಷ್ಟ ಪರಿಹಾರದ ಇತರ ಲೆಕ್ಕ ಶೀರ್ಷಿಕೆಯಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿರುವುದಿಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ.

ಈ ಅಪೀಲು ಭಾಗಶಃವಾಗಿ ಪುರಸ್ಕರಿಸಲಾಗಿದೆ. ಎಂವಿಸಿ ಸಂಖ್ಯೆ: 2075/2011ರಲ್ಲಿ ನ್ಯಾಯಾಧಿಕರಣವು ದಿನಾಂಕ: 17.10.2012ರಂದು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಈ ಮೂಲಕ ಮಾರ್ಪಡಿಸಲಾಗಿದೆ. ಅಪೀಲುದಾರ/ಕ್ಲೇಮುದಾರರಿಗೆ ಸಂದಾಯವಾಗಬೇಕಾದ ನಷ್ಟ ಪರಿಹಾರವನ್ನು 7,97,000/– ರೂಪಾಯಿಗಳಿಂದ 12,27,600 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಒಟ್ಟು ಹೆಚ್ಚಿಸಲಾದ ನಷ್ಟ ಪರಿಹಾರವು 4,30,600/– ರೂಪಾಯಿಗಳಾಗಿದೆ. ಹೆಚ್ಚಿಸಲಾದ ನಷ್ಟ ಪರಿಹಾರವು ವಾರ್ಷಿಕ ಶೇಕಡಾ 6ರ ಬಡ್ಡಿದರವನ್ನು ಹೊಂದಿರತಕ್ಕದ್ದು. ಮೊದಲ ಪ್ರತ್ಯರ್ಜಿದಾರನಾಗಿರುವ ನ್ಯಾಷನಲ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಟ್, ಈ ತೀರ್ಪಿನ ಪ್ರಮಾಣೀಕೃತ ಪ್ರತಿಯಾಗಿ ಸ್ವೀಕೃತಿಯ ದಿನಾಂಕದಿಂದ ನಾಲ್ಕು ವಾರದೊಳಗಾಗಿ ನ್ಯಾಯಾಧಿಕರಣದ ಮುಂದೆ ಬಡ್ಡಿಯೊಂದಿಗೆ ಹೆಚ್ಚಿಸಲಾದ ನಷ್ಟ ಪರಿಹಾರವನ್ನು ಮೊಬಲಗನ್ನು ಠೇವಣಿ ಇಡತಕ್ಕದ್ದು. ಇಡಲಾದ ಅಂಥ ಠೇವಣಿಯನ್ನು ಯುಕ್ತವಾದ ಕಾರ್ಯವಿಧಾನದ ಮೂಲಕ ಅಪೀಲುದಾರನಿಗೆ/ಕ್ಲೇಮುದಾರನಿಗೆ ಐತೀರ್ಪಿನ ನಿಬಂಧನೆಯಲ್ಲಿರುವಂತೆ ಹಂಚಿಕೆ ಮಾಡತಕ್ಕದ್ದು. ಸಂಬಂಧಪಟ್ಟ ನ್ಯಾಯಾಧಿಕರಣಕ್ಕೆ ಹದಿನೈದು ದಿನದೊಳಗಾಗಿ ಎಲ್‌ಸಿಆರ್ ಹಿಂದಿರುಗಿಸತಕ್ಕದ್ದು.

ತದನುಸಾರವಾಗಿ ಡಿಕ್ರಿಯನ್ನು ಈ ಕಚೇರಿ ವಿಲೇ ಮಾಡುವುದು.

*ಉಲ್ಲೇಖಿಸಲಾದ ಮೊಕದ್ದಮೆ* — *ಪ್ಯಾರಾದಲ್ಲಿ*

*1. (1976) 1 ಎಸ್‌ಸಿಸಿ 289*
*ಪ್ರತಾಪ್ ನರೋನಿ ಸಿಂಗ್ ಡಿಯೋ –ವಿರುದ್ಧ–*
*ಶ್ರೀನಿವಾಸ ಸಬಾಟ ಮತ್ತು ಮತ್ತೊಬ್ಬರು* *(ಉಲ್ಲೇ) 3*

ಅರ್ಜಿದಾರರ ಪರ: ಶ್ರೀ ಗಿರೀಶ್ ಬಿ. ಬಳದಾರೆ, ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀಮತಿ ಮಂಜುಳಾ ಎನ್ ತೇಜಸ್ವಿ, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್:**

ಎಂವಿಸಿ ಸಂಖ್ಯೆ: 2075/2011ರಲ್ಲಿ ನ್ಯಾಯಾಧಿಕರಣವು ದಿನಾಂಕ: 17.10.2012ರಂದು ನೀಡಿದ ತೀರ್ಪು ಮತ್ತು ಪರಿಹಾರ ಮೊತ್ತದ ವಿರುದ್ಧ, ನ್ಯಾಯಾಧಿಕರಣವು ನ್ಯಾಯ ನಿರ್ಣಯಿಸಿದ ನಷ್ಟ ಪರಿಹಾರದ ಮೊತ್ತವು ತೃಪ್ತಿದಾಯಕವಾಗಿಲ್ಲವೆಂದು, ನಷ್ಟ ಪರಿಹಾರವನ್ನು ಹೆಚ್ಚಿಸಬೇಕೆಂದು ಗಾಯಾಳು ಕ್ಲೇಮುದಾರರು ಸಲ್ಲಿಸಿದ ಅಪೀಲು ಇದಾಗಿದೆ.

2. ಅಪೀಲಿನ ವಾಸ್ತವಿಕ ಸಂಗತಿಗಳು ಈ ಕೆಳಗಿನಂತಿವೆ:

ಕ್ಲೇಮು ಅರ್ಜಿಯಲ್ಲಿ ಅರ್ಜಿದಾರನು ದಿನಾಂಕ: 21.06.2011ರ ಬೆಳಿಗ್ಗೆ ಸುಮಾರು 10.30ಗಂಟೆಯಲ್ಲಿ ತನ್ನ ಆಟೋರಿಕ್ಷಾದ ನೋಂದಣಿ ಸಂಖ್ಯೆ: ಕೆಎ–13–ಎ–5111ರಲ್ಲಿ ತನ್ನ ಚಿಕ್ಕಪ್ಪನ ಮಗನೊಂದಿಗೆ ಅರ್ಜಿದಾರನು ರಸ್ತೆಯ ಎಡಭಾಗದಲ್ಲಿ ಆಟೋದಲ್ಲಿ ಹೋಗುತ್ತಿರಬೇಕಾದರೆ, ಆ ಸಮಯದಲ್ಲಿ ನೋಂದಣಿ ಸಂಖ್ಯೆ: ಕೆಎ–21–360 ಸಂಖ್ಯೆಯ ಲಾರಿಯನ್ನು ಅದರ ಚಾಲಕನು ಅದನ್ನು ಅತಿಯಾದ ವೇಗದಿಂದ ಚಲಾಯಿಸಿಕೊಂಡು ಬಂದು ಮತ್ತು ನಿರ್ಲಕ್ಷ್ಯತೆ ರೀತಿಯಲ್ಲಿ ಅರ್ಜಿದಾರನ ಸದರಿ ಆಟೋಗೆ ಜೋರಾಗಿ ಡಿಕ್ಕಿ ಹೊಡೆದಿರುತ್ತಾನೆ. ಅದರ ಪರಿಣಾಮ ಅರ್ಜಿದಾರ ಎಡಗಾಲಿನ ಮಂಡಿಯ ಕೆಳಭಾಗದಲ್ಲಿ ಗಂಭೀರವಾದ ಮೂಳೆ ಮುರಿತವಾಗಿರುತ್ತದೆ. ಆ ಕೂಡಲೇ ಶ್ರೀನಿವಾಸ ಆಸ್ಪತ್ರೆಯಲ್ಲಿ ಅರ್ಜಿದಾರ ಗಾಯಾಳುವಿಗೆ ಪ್ರಥಮ ಚಿಕಿತ್ಸೆ ನೀಡಿ ತರುವಾಯ ಹೆಚ್ಚಿನ ಚಿಕಿತ್ಸೆಗಾಗಿ ಅವನನ್ನು ಒಳರೋಗಿಯಾಗಿ ಅಭಯ ಆಸ್ಪತ್ರೆಗೆ ದಾಖಲಿಸಲಾಯಿತು. ಅರ್ಜಿದಾರನ ಗಂಭೀರವಾದ ಗಾಯಗಳಿಗೆ ಸಾಕಷ್ಟು ಹಣವು ಖರ್ಚಾಯಿತು ಮತ್ತು ಅಧಿಕ ಪ್ರಮಾಣದ ವೈದ್ಯಕೀಯ ವೆಚ್ಚವು ತಗುಲಿತು. ಅರ್ಜಿದಾರ ವೃತ್ತಿಯಲ್ಲಿ ಕೃಷಿಕನಾಗಿರುತ್ತಾನೆ ಮತ್ತು ಮೀನು ಮಾರಾಟಗಾರನಾಗಿರುತ್ತಾನೆ ಮತ್ತು ತಿಂಗಳಿಗೆ 10,000/– ರೂಪಾಯಿಗಳನ್ನು ದುಡಿಯುತ್ತಿರುತ್ತಾನೆ. ಅಪಘಾತದ ಕ್ಷತಿಯ ಕಾರಣದಿಂದ ಅವನು ಅವನ ಕೆಲಸದಲ್ಲಿ ಮೊದಲಿನ ರೀತಿಯಲ್ಲಿ ತೊಡಗಿಕೊಳ್ಳಲು

ಸಾಧ್ಯವಾಗುತ್ತಿಲ್ಲ ಮತ್ತು ತನ್ನ ಕುಟುಂಬದ ಸದಸ್ಯರಿಗೆ ಮೊದಲಿನ ಹಾಗೆ ಸಹಾಯ ಮಾಡಲು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ನಷ್ಟ ಪರಿಹಾರವನ್ನು ಕೋರಿ ನ್ಯಾಯಾಧಿಕರಣದ ಮುಂದೆ ಅರ್ಜಿದಾರನು ಕ್ಲೇಮು ಅರ್ಜಿಯನ್ನು ದಾಖಲಿಸಿರುತ್ತಾನೆ.

ನೋಟೀಸು ಜಾರಿಯಾದ ನಂತರ ಅಪರಾಧ ಎಸಗಿದ ವಾಹನದ ಮಾಲೀಕ ಅಂದರೆ ವಿಮಾಕರ್ತನು ನ್ಯಾಯಾಧಿಕರಣದ ಮುಂದೆ ಹಾಜರಾಗಿ, ಲಿಖಿತ ಹೇಳಿಕೆಯನ್ನು ದಾಖಲಿಸಿರುತ್ತಾನೆ ಮತ್ತು ಕ್ಲೇಮು ಅರ್ಜಿಯನ್ನು ಪ್ರತಿರೋಧಿಸಿರುತ್ತಾನೆ. ನ್ಯಾಯಾಧಿಕರಣದ ಮುಂದೆ ನಡೆದ ವಿಚಾರಣೆಯ ಅವಧಿಯಲ್ಲಿ ಕ್ಲೇಮುದಾರನು ಸಂಭವಿಸಿದ ಅಪಘಾತವು ಅಪರಾಧ ಎಸಗಿದ ವಾಹನದ ಚಾಲಕನ ದಿವ್ಯ ನಿರ್ಲಕ್ಷತೆಯಿಂದಲೇ ಅಪಘಾತ ಸಂಭವಿಸಿದೆ ಎಂದು ಸ್ಪಷ್ಟಪಡಿಸಿರುತ್ತಾನೆ ಮತ್ತು ವಾಹನವು ವಿಮೆಯನ್ನು ಒಳಗೊಂಡಿದೆ ಮತ್ತು ಅದನ್ನು ವಾಹನದ ಮಾಲೀಕನಾಗಲೀ ಅಥವಾ ವಿಮಾಕರ್ತನಾಗಲೀ ಪ್ರಶ್ನಿಸಿರುವುದಿಲ್ಲ.

ನ್ಯಾಯಾಧಿಕರಣವು ಮೌಖಿಕ ಮತ್ತು ದಸ್ತಾವೇಜಿಯ ಸಾಕ್ಷ್ಯಗಳನ್ನು ಪರಿಶೀಲಿಸಿದ ನಂತರ ಅದು ಅಪಘಾತವು ಚಾಲಕನ ಅತಿವೇಗ ಮತ್ತು ನಿರ್ಲಕ್ಷತೆಯ ಕಾರಣದಿಂದಲೆ ಅಪಘಾತ ಸಂಭವವಾಗಿದೆ ಎಂದು ನಿರ್ಣಯಿಸಿದೆ ಮತ್ತು ತತ್ಪರಿಣಾಮವಾಗಿ, ಅರ್ಜಿಯು ಇತ್ಯರ್ಥವಾದ ದಿನಾಂಕದವರೆಗೆ ವಾರ್ಷಿಕ ಶೇ.6ರಷ್ಟು ಬಡ್ಡಿ ದರದೊಂದಿಗೆ ಒಟ್ಟು 7,97,000/– ರೂಪಾಯಿಗಳನ್ನು ನಷ್ಟ ಪರಿಹಾರವಾಗಿ ನೀಡಬೇಕೆಂದು ನ್ಯಾಯಾಧಿಕರಣವು ನಿರ್ಣಯಿಸಿರುತ್ತದೆ. ಈ ತೀರ್ಪಿನ ನಿರ್ಣಯವನ್ನು ಅಪೀಲುದಾರನು ಪ್ರಶ್ನಿಸಿರುವುದನ್ನು ವಿವಿಧ ಕಾರಣಗಳ ಮೇಲೆ ನಷ್ಟ ಪರಿಹಾರವನ್ನು ಹೆಚ್ಚಿಸಬೇಕೆಂದು ಕೋರಿ ಈ ಅಪೀಲು ಅರ್ಜಿಯಲ್ಲಿ ನ್ಯಾಯಾಧಿಕರಣದ ನ್ಯಾಯ ನಿರ್ಣಯವನ್ನು ಪ್ರಶ್ನಿಸಿರುವನು.

3. ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ವಾದಾಂಶಗಳು ಹೀಗಿದೆ, ನ್ಯಾಯಾಧಿಕರಣವು ಅಪೀಲುದಾರನ ಎಡಗಾಲಿನ ಮಂಡಿಯ ಕೆಳಭಾಗವು

ಜಜ್ಜಿ ಹೋಗಿರುವುದು ಮತ್ತು ಆ ಪರಿಣಾಮದಿಂದ ಅದನ್ನು ಕತ್ತರಿಸಿ ತೆಗೆದುಹಾಕಿರುವ ವಾಸ್ತವ ಸಂಗತಿಯನ್ನು ಪರಿಗಣನೆಗೆ ತೆಗೆದುಕೊಳ್ಳುವಲ್ಲಿ ಅದು ವಿಫಲವಾಗಿರುತ್ತದೆ. ದೇಹದ ಒಂದು ಅಂಗವನ್ನು ತೆಗೆದುಹಾಕುವುದು ಎಂದರೆ ಅದನ್ನು ಹೇಳಿಕೊಳ್ಳಲು ಸಾಧ್ಯವಾಗದಷ್ಟು ನೋವಿನ ವಿಷಯವಾಗಿರುತ್ತದೆ ಮತ್ತು ಅವನು ಶಾಶ್ವತ ಅಂಗವೈಕಲ್ಯತೆಯಿಂದ ಬಾಧಿತನಾಗುತ್ತಾನೆ. ಆದುದರಿಂದ, ನ್ಯಾಯಾಧಿಕರಣವು 'ನೋವು ಮತ್ತು ಬಾಧೆ'ಯನ್ನು ಜೊತೆಯಾಗಿ ಪರಿಗಣಿಸಿ ನೀಡಿದ ನಷ್ಟ ಪರಿಹಾರವನ್ನು ಯುಕ್ತವಾಗಿ ಹೆಚ್ಚಿಸಬೇಕಾಗಿರುವುದು ಅಗತ್ಯವಾಗಿದೆ ಎಂದು ನ್ಯಾಯವಾದಿಗಳು ವಾದಾಂಶದಲ್ಲಿ ಮಂಡಿಸಿರುವರು.

ಮುಂದುವರೆದು ಮಾನ್ಯ ನ್ಯಾಯವಾದಿಗಳು ವೈದ್ಯರ ಸಾಕ್ಷ್ಯದ ಪ್ರಕಾರದಂತೆ ಇಡೀ ದೇಹದ ಅಂಗವೈಕಲ್ಯತೆಯೂ ಶೇ.80ರಷ್ಟು ಇದೆ ಎಂದು ನಿರ್ಧರಿಸಿದೆ ಎಂದು ವಾದಾಂಶದಲ್ಲಿ ತಿಳಿಸಿರುವರು. ಆದುದರಿಂದ ವೈದ್ಯರು ನಿರ್ಧರಿಸಿರುವಂತೆ ಶೇ.80ರಷ್ಟು ಅಂಗವೈಕಲ್ಯತೆ ಇರುವಾಗ ನ್ಯಾಯಾಧಿಕರಣವು ಕಳೆದುಕೊಂಡ ಭವಿಷ್ಯದ ಗಳಿಕೆಯನ್ನು ನಷ್ಟ ಪರಿಹಾರದಲ್ಲಿ ಲೆಕ್ಕ ಹಾಕುವುದಕ್ಕೆ ಪರಿಗಣನೆಯಾಗಿ ತೆಗೆದುಕೊಂಡಿಲ್ಲದಿರುವುದು ನ್ಯೂನತೆಯಾಗಿ ಇಲ್ಲಿ ಕಂಡು ಬರುತ್ತವೆ ಎಂದು ವಾದಾಂಶದಲ್ಲಿ ಮಂಡಿಸಿರುವರು. ವಾದವನ್ನು ಮುಂದುವರೆಸಿ ಅಪಘಾತವು 2011ರಲ್ಲಿ ಸಂಭವಿಸಿದ ಲೋಕ ಅದಾಲತ್ ತಃಖ್ತೆಯ ಪ್ರಕಾರದಂತೆ ಅಪೀಲುದಾರನ ಆದಾಯವನ್ನು 6,000/–ರೂಪಾಯಿಗಳೆಂದು ಪರಿಗಣಿಸಿದೆ ಮತ್ತು ಶೇ. 80ರಷ್ಟು ಅಂಗವೈಕಲ್ಯತೆಗೆ 'ಕಳೆದುಕೊಂಡ ಭವಿಷ್ಯದ ಗಳಿಕೆಯನ್ನು' ಜೊತೆಯಲ್ಲಿ ಲೆಕ್ಕ ಹಾಕಿ ಐತೀರ್ಪು ನೀಡಬೇಕಿದೆ ಎಂದು ನಿವೇದಿಸಿರುವರು.

ಅವರು ತಮ್ಮ ವಾದಾಂಶಗಳಿಗೆ ಪೂರಕವಾಗಿ ಅಪೀಲುದಾರರ ಮಾನ್ಯ ನ್ಯಾಯವಾದಿಗಳು ***ಪ್ರತಾಪ್ ನರೋನಿ ಸಿಂಗ್ ಡಿಯೋ – ವಿರುದ್ಧ – ಶ್ರೀನಿವಾಸ ಸಬಾಟ ಮತ್ತು ಮತ್ತೊಬ್ಬರು***[1] ಮೊಕದ್ದಮೆಯ ತೀರ್ಪಿನಲ್ಲಿ ಅವಲಂಬನೆಯಾಗಿ ಉದ್ಧೃತಗೊಳಿಸಿರುವರು ಅದು ಈ ಕೆಳಗಿನಂತಿದೆ:

> *"2. ಆಯುಕ್ತರು ದಿನಾಂಕ: 06.05.1969ರಲ್ಲಿ ಮಾಡಿದ ಆದೇಶದಲ್ಲಿ, ಪ್ರತ್ಯರ್ಜಿದಾರನ ಎಡಗೈನ ಮೊಣಕೈನ ಮೇಲ್ಭಾಗಕ್ಕೆ ಕ್ಷತಿ ಉಂಟಾದ*

1. (1976) 1 ಎಸ್‌ಸಿಸಿ 289

*ಪರಿಣಾಮ ಮೊಣಕೈನ ಮೇಲ್ಭಾಗವನ್ನು ತೆಗೆದು ಹಾಕಲಾಗಿದೆ. ಪ್ರತ್ಯರ್ಜಿದಾರನ ವೃತ್ತಿಯಲ್ಲಿ ಬಡಗಿ ಕೆಲಸ ಮಾಡುತ್ತಿರುತ್ತಾನೆ ಮತ್ತು ಅವನು ತನ್ನ ಎಡಗೈ ಭಾಗವನ್ನು ಕಳೆದುಕೊಂಡ ಪರಿಣಾಮ ಅವನ ಬಡಗಿ ಕೆಲಸವನ್ನು ನಿರ್ವಹಿಸಲು ಸಾಧ್ಯವಿಲ್ಲ. ಬಡಗಿ ಕೆಲಸವನ್ನು ಒಂದು ಕೈಯಿಂದ ನಿರ್ವಹಿಸಲು ಸಾಧ್ಯವಿಲ್ಲ ಎಂಬುದು ಇಲ್ಲಿ ರುಜುವಾತಾಗುತ್ತದೆ. ಆದುದರಿಂದ ಅವನು ತನ್ನ ಗಳಿಕೆಯ ಸಾಮರ್ಥ್ಯವನ್ನು ಶೇ.100ರಷ್ಟು ಕಳೆದುಕೊಂಡಿದ್ದಾನೆ ಎಂದು ನ್ಯಾಯನಿರ್ಣಯಕ್ಕೆ ಬರಬಹುದಾಗಿದೆ. ಈ ಆಧಾರದ ಮೇಲೆ, ಸಂತ್ರಸ್ತನಿಗೆ ನಷ್ಟ ಪರಿಹಾರವಾಗಿ 9,800/– ರೂಪಾಯಿಗಳನ್ನು ಲೆಕ್ಕ ಹಾಕಲಾಗಿದೆ ಮತ್ತು ಸಂದಾಯದ ದಂಡವನ್ನು ಶೇ.50ರಷ್ಟನ್ನು ವಿಸ್ತರಿಸಲಾಗಿದೆ ಜೊತೆಯಲ್ಲಿ ವಾರ್ಷಿಕ ಶೇ.6ರಷ್ಟು ಬಡ್ಡಿ ದರದೊಂದಿಗೆ ಒಟ್ಟು 15,092/– ರೂಪಾಯಿಗಳನ್ನು ಲೆಕ್ಕ ಹಾಕಲಾಗಿದೆ ಎಂದು ಆದೇಶಿಸಿರುವರು".*

ಮುಂದುವರೆದು, ಸದರಿ ತೀರ್ಪಿನ 5ನೇ ಪ್ಯಾರಾದಲ್ಲಿನ ನಿರ್ಣಯವು ಈ ಕೆಳಗಿನಂತಿದೆ:

*"5. 'ಒಟ್ಟಾರೆ ಅಂಗವೈಕಲ್ಯತೆ' ಎಂಬ ಅಭಿವ್ಯಕ್ತಿಯನ್ನು ಅಧಿನಿಯಮದ 2(1)(ಎಲ್) ಪ್ರಕರಣದಲ್ಲಿ ಪರಿಭಾಷಿಸಲಾಗಿದೆ ಅದು ಈ ಕೆಳಗಿನಂತಿದೆ:*

*''ಒಟ್ಟಾರೆ ಅಂಗವೈಕಲ್ಯತೆ'' ಎಂದರೆ, ಅಂಥ ಅಂಗವೈಕಲ್ಯತೆಯೂ ತಾತ್ಕಾಲಿಕ ಅಥವಾ ಶಾಶ್ವತ ಸ್ವರೂಪದಲ್ಲಿದ್ದು, ಕೆಲಸಗಾರನು ತನ್ನೆಲ್ಲ ಕೆಲಸಗಳನ್ನು ಮಾಡಿಕೊಳ್ಳಲು ಅಶಕ್ತನಾಗಿರುವುದು ಅಂಥ ಅಂಗವೈಕಲ್ಯತೆಯೂ ಅಪಘಾತದ ಪರಿಣಾಮವಾಗಿ ಸಂಭವಿಸಿರಬಹುದು.*

ಪ್ರತ್ಯರ್ಜಿದಾರನಿಗೆ ಶಾಶ್ವತ ಅಂಗವೈಕಲ್ಯತೆಯ ಸ್ವರೂಪದ ಅಂಥ ಕ್ಷತಿಗಳ ಸಂಬಂಧದಲ್ಲಿ ಯಾವುವೇ ವಿವಾದವಿರುವುದಿಲ್ಲ

ಮತ್ತು ಅಪಘಾತದ ಸಮಯಕ್ಕೆ ಮುಂಚಿತವಾಗಿ ಅವನು ತನ್ನೆಲ್ಲಾ ಕೆಲಸವನ್ನು ಮಾಡಿಕೊಳ್ಳುವುದಕ್ಕೆ ಸಮರ್ಥನಾಗಿರುವುದನ್ನು ಪರಿಗಣಿಸಬೇಕಾಗಿರುವುದು ಈಗಿನ ಪ್ರಶ್ನೆಯಾಗಿದೆ XXXX."

(ಒತ್ತು ನೀಡಲಾಗಿದೆ)

ಅಧಿನಿಯಮದ 2(1)(ಎಲ್) ಪ್ರಕರಣದಲ್ಲಿನ ಪರಿಭಾಷೆಯ ಅಧಾರದ ಮೇಲೆ ಅಪೀಲುದಾರರ ಮಾನ್ಯ ನ್ಯಾಯವಾದಿಗಳು ತುಂಬಾ ಭಾವೋದ್ವೇಗದಲ್ಲಿ ತಮ್ಮ ವಾದಾಂಶವನ್ನು ಮಂಡಿಸಿರುವರು. ವಾದದಲ್ಲಿ, ಅಪೀಲುದಾರರು ಗಾಯಾಳು, ವೃತ್ತಿಯಲ್ಲಿ ಕೃಷಿಕ ಮತ್ತು ಮೀನು ಮಾರಾಟಗಾರನಾಗಿರುವನು. ಅವನ ಎಡಗಾಲಿನ ಮಂಡಿಯ ಕೆಳಭಾಗಕ್ಕೆ ಅಪಘಾತದಿಂದ ಆದ ತೀವ್ರತರವಾದ ಗಾಯ ಸ್ವರೂಪದಿಂದ ಮಂಡಿಯ ಕೆಳಭಾಗವನ್ನು ಕತ್ತರಿಸಿ ತೆಗೆದು ಹಾಕಿದ ಪರಿಣಾಮ ಅವನು ತನ್ನ ಜೀವನೋಪಾಯ ಉದ್ಯೋಗವನ್ನು ನಡೆಸುವುದು ಅಸಾಧ್ಯವಾಗಿದೆ. ಪ್ರಸ್ತುತ ಮೊಕದ್ದಮೆಯಲ್ಲಿ ಸಹ ಅಪಘಾತಕ್ಕೆ ಮುಂಚಿತವಾಗಿ ಅವನು ನಿರ್ವಹಿಸುತ್ತಿದ್ದ ಉದ್ಯೋಗವನ್ನು ಮುಂದುವರೆಸುವುದಕ್ಕೆ ಅವನು ಅಸಮರ್ಥನಾಗಿರುವನು. ಅಪೀಲುದಾರನ ಇಡೀ ದೇಹದ ಅಂಗವೈಕಲ್ಯತೆಯೂ ಶೇ.80ರಷ್ಟಾಗಿದೆ. ಅಂಗವೈಕಲ್ಯತೆಯ ಕಾರಣದಿಂದ ಕಳೆದುಕೊಂಡ ಆದಾಯವನ್ನು ನಷ್ಟಪರಿಹಾರವಾಗಿ ಪರಿಗಣಿಸಿ ಲೆಕ್ಕ ಹಾಕಬೇಕೆಂದು ನಿವೇದಿಸಿರುವರು. ನ್ಯಾಯಾಧಿಕರಣವು ಈ ಮೇಲಿನ ಯಾವುವೇ ಅಂಶವನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ. ಈ ನ್ಯಾಯಾಲಯವಾದರೂ ಸದರಿ ಅಭಿಪ್ರಾಯೋಕ್ತಿಯ ದೃಷ್ಟಿಯಿಂದ ಶೇ.80ರಷ್ಟಿನ ಅಂಗವೈಕಲ್ಯತೆಯನ್ನು, ಅಂಗವೈಕಲ್ಯತೆಯ ಕಾರಣದಿಂದ ಕಳೆದುಕೊಂಡ ಭವಿಷ್ಯದ ಆದಾಯವನ್ನು ಲೆಕ್ಕ ಹಾಕುವುದಕ್ಕೆ ಪರಿಗಣಿಸಬೇಕೆಂದು ಮಾನ್ಯ ನ್ಯಾಯವಾದಿಗಳು ತಮ್ಮ ವಾದವನ್ನು ಮಂಡಿಸಿರುವರು.

ಮಾನ್ಯ ನ್ಯಾಯವಾದಿಗಳು ತಮ್ಮ ವಾದವನ್ನು ಮತ್ತಷ್ಟು ಮುಂದುವರೆಸಿ, ನ್ಯಾಯಾಧಿಕರಣ "ಚಿಕಿತ್ಸೆಯ ಕಾಲಾವಧಿಯಲ್ಲಿನ ಆದಾಯದ ನಷ್ಟ" ಹಾಗೂ ಸೌಕರ್ಯಗಳ ನಷ್ಟದ ಲೆಕ್ಕಶೀರ್ಷಿಕೆಯಲ್ಲಿ ತುಂಬಾ ಅತ್ಯಲ್ಪ ಪ್ರಮಾಣದ ನಷ್ಟ ಪರಿಹಾರವನ್ನು ನೀಡಿದೆ. ಈ ನ್ಯಾಯಾಲಯವು ಲೆಕ್ಕ ಶೀರ್ಷಿಕೆಯನ್ನು ಹೆಚ್ಚಿಸಲು

ಅಗತ್ಯವಾಗಿ ಪರಿಗಣಿಸುವುದು ಈ ಸಂಬಂಧದಲ್ಲಿ ಅಪೀಲುದಾರನು ಅವನು ತನ್ನ ಎಡಕಾಲಿನ ಮಂಡಿಯ ಕೆಳಭಾಗವನ್ನು ಶಾಶ್ವತವಾಗಿ ಕಳೆದುಕೊಂಡು ತನ್ನ ನಿಯತಕಾಲಿಕ ಚಟುವಟಿಕೆಗಳನ್ನು ನಿರ್ವಹಿಸಲು ಸಹಾಯಕ್ಕಾಗಿ ಇತರ ವ್ಯಕ್ತಿಗಳನ್ನು ಯಾವಾಗಲು ಅವಲಂಬಿಸಬೇಕಾಗಿರುವುದರಿಂದ ವಾಸ್ತವವಾಗಿ ಆತನ ಸಂತೋಷ ಮತ್ತು ಸೌಕರ್ಯಗಳಲ್ಲಿ ಅವನು ನಷ್ಟವನ್ನು ಹೊಂದಿರುತ್ತಾನೆ. ಹಾಗಾಗಿ, ಮೇಲಿನ ಎಲ್ಲ ಶೀರ್ಷಿಕೆಗಳ ಸಂಬಂಧದಲ್ಲಿ ನ್ಯಾಯಾಧಿಕರಣದಿಂದ ಐತೀರ್ಪು ನೀಡಿರುವ ನಷ್ಟ ಪರಿಹಾರವನ್ನು ಸೂಕ್ತವಾಗಿ ಹೆಚ್ಚಿಸುವುದಕ್ಕಾಗಿ ಅಪೀಲುದಾರನಿಂದ ಸಲ್ಲಿಸಲಾಗಿರುವ ಈ ಅಪೀಲನ್ನು ಅನುಮತಿಸುವಂತೆ ಮಾನ್ಯ ವಕೀಲರು ಪಟ್ಟು ಬಿಡದೆ ವಾದಿಸಿದ್ದಾರೆ.

4. ಈ ವಾದಾಂಶಕ್ಕೆ ವಿರುದ್ಧವಾಗಿ ಮೊದಲ ಪ್ರತ್ಯರ್ಜಿದಾರನಾದ–ವಿಮಾ ಕಂಪನಿಯ ಮಾನ್ಯ ನ್ಯಾಯವಾದಿಗಳು ಅಪೀಲುದಾರರ ವಾದಾಂಶಗಳೆಲ್ಲವನ್ನು ಬಾವೋದ್ರೇಕದಿಂದಲೇ ವಿರೋದಿಸಿ ತಮ್ಮ ವಾದಾಂಶವನ್ನು ಮಂಡಿಸಿರುವರು ಮತ್ತು ನ್ಯಾಯಾಧಿಕರಣವು ಕ್ಲೇಮುದಾರನ ಎಡಕಾಲಿನ ಮಂಡಿಯ ಕೆಳಭಾಗವನ್ನು ತೆಗೆದು ಹಾಕಿರುವುದನ್ನು ವಾಸ್ತವವಾಗಿ ಪರಿಗಣಿಸಿದೆ ಮತ್ತು ಎಲ್ಲ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ ಪರಿಗಣಿಸಿದ ನಷ್ಟ ಪರಿಹಾರವು ಸರಿಯಾಗಿದೆ ಮತ್ತು ನ್ಯಾಯಸಮ್ಮತದಿಂದ ಕೂಡಿದೆ ಮತ್ತು ಇದರಿಂದ ಯಾವುದೇ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ ನಷ್ಟ ಪರಿಹಾರವನ್ನು ಹೆಚ್ಚಿಸುವ ಅಗತ್ಯವಿರುವುದಿಲ್ಲ ಎಂದು ವಾದಿಸಿರುವರು. ಆದುದರಿಂದ, ಮಾನ್ಯ ನ್ಯಾಯವಾದಿಗಳು ತಮ್ಮ ವಾದದಲ್ಲಿ ನ್ಯಾಯಾಧಿಕರಣವು ಹೊರಡಿಸಿದ ತೀರ್ಪಿಗೆ ಈ ನ್ಯಾಯಾಲಯವು ಯಾವುದೇ ಹಸ್ತಕ್ಷೇಪ ಮಾಡುವ ಅಗತ್ಯ ಇಲ್ಲವೆಂದು ನಿವೇದಿಸಿರುವರು.

5. ಪಕ್ಷಕಾರರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಾಂಶಗಳನ್ನು ಹಿನ್ನೆಲೆಯಾಗಿಟ್ಟುಕೊಂಡು, ನನಗೆ, ದಿನಾಂಕ: 21.06.2011ರಂದು ಸಂಭವಿಸಿದ ಅಪಘಾತದ ಸಂಬಂಧದಲ್ಲಿ ಮತ್ತು ಅಪೀಲುದಾರ / ಕ್ಲೇಮುದಾರನು ಸಂಭವಿಸಿದ ಅಪಘಾತದಿಂದ ಗಾಯಗೊಂಡಿರುವ ಸಂಬಂಧದಲ್ಲಿ ಯಾವುದೇ ವಿವಾದವು

ಏರ್ಪಡದಿರುವುದು ಕಂಡುಬರುತ್ತದೆ. ಅಪೀಲುದಾರರು ನಿಶಾನೆ ಪಿ.7ರಲ್ಲಿ ಹಾಜರುಪಡಿಸಿದ ಗಾಯದ ಪ್ರಮಾಣಪತ್ರದಲ್ಲಿ ಅಪೀಲುದಾರರ ಎಡಗಾಲಿನ ಮಂಡಿಯ ಕೆಳಭಾಗವು ಸಂಪೂರ್ಣವಾಗಿ ಜಜ್ಜಿ ಹೋಗಿರುವುದರಿಂದ ಎಡಗಾಲಿನ ಮಂಡಿಯ ಕೆಳಭಾಗವನ್ನು ಕತ್ತರಿಸಿ ತೆಗೆದುಹಾಕಲಾಗಿದೆ ಎಂದು ದೃಢೀಕರಿಸಲಾಗಿದೆ ಎಂಬುದು ಇಲ್ಲಿ ನಮಗೆ ಕಂಡು ಬರುತ್ತದೆ.

6. ಅಪೀಲುದಾರನು ಮೇಲೆ ತಿಳಿಸಿದ ಗಾಯಗಳಿಂದ ಬಾಧಿತನಾಗಿರುವ ಅವನು ಎಡಗಾಲಿನ ಮಂಡಿಯ ಕೆಳಭಾಗವನ್ನು ಕತ್ತರಿಸಿಹಾಕಿರುವ ಸಂಬಂಧದಲ್ಲಿ ನಮಗೆ ಅಪೀಲುದಾರನು ಗಾಯದಿಂದ ಅನುಭವಿಸಿರುವ ನರಕ ಯಾತನೆ ಮತ್ತು ನೋವು ವರ್ಣಿಸಲು ಸಾಧ್ಯವಾಗದಷ್ಟು ನೋವು ಸಂಕಟವನ್ನು ಅನುಭವಿಸಿರುವುದು ಕಂಡು ಬರುತ್ತದೆ. ಆದುದರಿಂದ ನ್ಯಾಯಾಧೀಕರಣವು 'ನೋವು ಮತ್ತು ಸಂಕಟ'ದ ಶೀರ್ಷಿಕೆಯಲ್ಲಿ ನಷ್ಟ ಪರಿಹಾರವನ್ನು 30,000/– ರೂಪಾಯಿಗಳನ್ನು ನಿರ್ಣಯಿಸಿರುವುದು ಕಡಿಮೆಯಾಗಿದೆ ಎಂದು ನಮಗೆ ಕಂಡು ಬಂದಿದೆ. ಆದುದರಿಂದ, ಸದರಿ ಲೆಕ್ಕ ಶೀರ್ಷಿಕೆಯಲ್ಲಿ ನಷ್ಟ ಪರಿಹಾರವಾಗಿ 20,000/– ರೂಪಾಯಿಗಳನ್ನು ಹೆಚ್ಚುವರಿಕೆಯಾಗಿ ಈ ಮೂಲಕ ಹೆಚ್ಚಿಸಲಾಗಿದೆ.

7. ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಾಂಶಗಳನ್ನು ಮತ್ತು ತನ್ನ ನಿವೇದನೆಯಲ್ಲಿ ಉಲ್ಲೇಖಿಸಿದ ಪೂರಕವಾದ ನಿರ್ಣಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಪರಾಮರ್ಶಿಸಿದಾಗ ಅಪೀಲುದಾರರ ಮಾನ್ಯ ನ್ಯಾಯವಾದಿಗಳ ವಾದಾಂಶದಲ್ಲಿ ಸಾಕಷ್ಟು ಹುರುಳಿರುವುದು ನನಗೆ ಕಂಡು ಬರುತ್ತದೆ. ನ್ಯಾಯಾಧಿಕರಣವು ನಷ್ಟ ಪರಿಹಾರಕ್ಕೆ ಅಪೀಲುದಾರನ ಶೇಕಡವಾರು ಅಂಗವೈಕಲ್ಯತೆಯನ್ನು ಮತ್ತು "ನಷ್ಟವಾದ ಭವಿಷ್ಯ ಆದಾಯ" ಪರಿಗಣಿಸದಿರುವುದು ನ್ಯೂನ್ಯತೆಯಾಗಿ ಇಲ್ಲಿ ನನಗೆ ಕಂಡುಬರುತ್ತದೆ. ವೈದ್ಯರು ಅಪೀಲುದಾರನ ಅಂಗವೈಕಲ್ಯತೆಯೂ ಶೇಕಡಾ 80ರಷ್ಟಿದೆ ಎಂದು ನಿರ್ಧರಿಸಿರುವರು, ನನಗೆ ಇಲ್ಲಿ ಅಪೀಲುದಾರನ ಇಡೀ ದೇಹದ ಅಂಗವೈಕಲ್ಯತೆಯೂ ಶೇ.60ರಷ್ಟಾಗಿದೆ ಎಂದು ಕಂಡು ಬರುತ್ತದೆ. ಇದರ ಜೊತೆಯಲ್ಲಿ "ನಷ್ಟವಾದ ಭವಿಷ್ಯದ ಆದಾಯದ

ಸಂಬಂಧದಲ್ಲಿ ನಷ್ಟ ಪರಿಹಾರವನ್ನು ಪರಾಮರ್ಶಿಸಬೇಕಾಗಿದೆ. ಅಲ್ಲದೆ, ಅಪೀಲುದಾರನ ಆದಾಯದ ಸಂಬಂಧದಲ್ಲಿ ಅಂಗೀಕರಿಸುವಂತಹ ಸಾಕ್ಷ್ಯವು ಇರುವುದಿಲ್ಲ. ಅಪಘಾತವು 2011ರಲ್ಲಿ ಸಂಭವಿಸಿದೆ. ಈ ಸಂಬಂಧದಲ್ಲಿ ಲೋಕ ಅದಾಲತ್ ಇತ್ಯರ್ಥಪಡಿಸುವುದಕ್ಕಾಗಿ ಮಾನದಂಡಸೂತ್ರಗಳನ್ನು ಅನ್ವಯಿಸಿಕೊಂಡಿದೆ. ಆ ಪ್ರಕಾರದಂತೆ ಅಪೀಲುದಾರರ ಮಾಸಿಕ ಆದಾಯವು 6,000/– ರೂಪಾಯಿಗಳಾಗಿದೆ ಎಂದು ನಾನು ಇಲ್ಲಿ ನಿರ್ಣಯಿಸಿರುತ್ತೇನೆ.

8. ಆದುದರಿಂದ ಗಾಯಾಳುವಿನ ಆದಾಯವು 6,000/– ರೂಪಾಯಿಗಳಾಗಿದೆ ಮತ್ತು ಅಂಗವೈಕಲ್ಯತೆಯೂ ಶೇ.60ರಷ್ಟು ಆಗಿರುತ್ತದೆ. ನ್ಯಾಯಾಧಿಕರಣವು ಅನ್ವಯಿಸಿಕೊಂಡ ಗುಣಾಂಕವಾದ 10ರೊಂದಿಗೆ ಶೇ.60 ಹಾಗೂ 6,000/– ರೂ.ಗಳನ್ನು ಗುಣಿಸಿದಾಗ ನಷ್ಟ ಪರಿಹಾರ ನಷ್ಟವಾದ ಭವಿಷ್ಯದ ಆದಾಯವಾದ 7,77,600/– ರೂಪಾಯಿಗಳು ಬರುತ್ತದೆ. (6000 x 12 x 18 x 60/100).

ಮುಂದುವರೆದು, ನಾನು ಹೆಚ್ಚುವರಿ ನಷ್ಟ ಪರಿಹಾರವಾಗಿ, ಚಿಕಿತ್ಸೆಯ ಕಾಲಾವಧಿಯಲ್ಲಿ ನಷ್ಟವಾದ ಆದಾಯವಾಗಿ 5,000/– ರೂಪಾಯಿಗಳನ್ನು ಈ ಮೂಲಕ ನೀಡಲು ಆದೇಶಿಸುತ್ತೇವೆ.

ಅಪೀಲುದಾರನು ತನ್ನ ಬದುಕಿನ ಎಲ್ಲಾ ಸಂತೋಷ ಮತ್ತು ಸೌಕರ್ಯಗಳನ್ನು ಅಪಘಾತದ ನಂತರದಲ್ಲಿ ಕಳೆದುಕೊಂಡಿರುತ್ತಾನೆ ಅವನ ಎಡಗಾಲಿನ ಮಂಡಿಯ ಕೆಳಭಾಗವನ್ನು ಕಳೆದುಕೊಂಡಾಗ ಅಪೀಲುದಾರರಿಗೆ ಆಗಿರುವ ಅನಾನುಕೂಲವನ್ನು ಊಹಿಸಲು ಕಷ್ಟಕರವೆನ್ನಬಹುದು. ಈ ಲೆಕ್ಕ ಶೀರ್ಷಿಕೆಯಲ್ಲಿ ನ್ಯಾಯಾಧಿಕರಣವು 'ಸೌಕರ್ಯಗಳ ನಷ್ಟ' ಶೀರ್ಷಿಕೆಯಲ್ಲಿ 10,000/– ರೂಪಾಯಿಗಳನ್ನು ನಷ್ಟಪರಿಹಾರವನ್ನು ನಿರ್ಣಯಿಸಿರುವುದು ನನಗೆ ಕಂಡು ಬಂದಿದೆ. ಇದು ತುಂಬಾ ಅತ್ಯಲ್ಪವಾದ ನಷ್ಟಪರಿಹಾರವಾಗಿದೆ. ಆದುದರಿಂದ ನಾನು ಈ ಮೂಲಕ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ಇನ್ನು 10,000/– ರೂಪಾಯಿಗಳನ್ನು ಈ ಮೂಲಕ ಹೆಚ್ಚಿಸುತ್ತಿದ್ದೇನೆ. ಅಲ್ಲದೆ ಅಪೀಲುದಾರನ ಭವಿಷ್ಯದ ಉದ್ದೇಶಗಳಿಗಾಗಿ 50,000/–ಗಳನ್ನು

ನೀಡುವುದು ನ್ಯಾಯಸಮ್ಮತವಾಗಿದೆ ಎಂಬುದು ನನಗೆ ಕಂಡು ಬರುತ್ತವೆ. ಆದುದರಿಂದ ತದನುಸಾರವಾಗಿ ಅವುಗಳನ್ನು ಮಂಜೂರು ಮಾಡಲು ಆದೇಶಿಸಿರುತ್ತೇನೆ. ಆದಾಗ್ಯೂ, ನ್ಯಾಯಾಧಿಕರಣವು ಮಂಜೂರು ಮಾಡಿದ ನಷ್ಟ ಪರಿಹಾರದ ಇತರ ಲೆಕ್ಕ ಶೀರ್ಷಿಕೆಯಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿರುವುದಿಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ.

9. ಮೇಲೆ ಮಾಡಲಾದ ಪರಾಮರ್ಶೆಯ ದೃಷ್ಟಿಯಲ್ಲಿ ಮತ್ತು ಮಾರ್ಪಾಡು ಮಾಡಲಾದ ಘಟಕಾಂಶದೊಂದಿಗೆ ನಷ್ಟ ಪರಿಹಾರವನ್ನು ಮರು ಪರಿಶೀಲಿಸಲಾಗಿದೆ ಅದು ಈ ಕೆಳಗಿನಂತಿದೆ:

| **ನಿರ್ದಿಷ್ಟತೆಗಳು** | **ಮೋಟಾರು ಅಧಿನಿಯಮದ ನಷ್ಟ ಪರಿಹಾರದ ಐತೀರ್ಪು** | **ಈ ನ್ಯಾಯಾಲಯವು ಹೆಚ್ಚಿಸಿದ ನಷ್ಟ ಪರಿಹಾರ** | **ಒಟ್ಟು** |
|---|---|---|---|
| ನೋವು ಮತ್ತು ಸಂಕಟ | 30,000 | 20,000 | 50,000 |
| ವೈದ್ಯಕೀಯ ವೆಚ್ಚ, ಪ್ರಯಾಣ, ವಿಶೇಷ ಚಿಕಿತ್ಸಾ ಮತ್ತು ಪರಿಚಾರಕ ವೆಚ್ಚ | 2,25,000 | ಇಲ್ಲ | 2,25,000 |
| ನಷ್ಟವಾದ ಭವಿಷ್ಯದ ಆದಾಯ | 4,32,000 | 3,45,600 | 7,77,600 |
| ಚಿಕಿತ್ಸೆಯ ಸಮಯದಲ್ಲಿ ನಷ್ಟವಾದ ಆದಾಯ | 25,000 | 5,000 | 30,000 |
| ಕೃತಕ ಕಾಲು | 25,000 | ಇಲ್ಲ | 25,000 |
| ಉದ್ದೇಶಿತ ಮದುವೆಯ ನಷ್ಟ | 50,000 | ಇಲ್ಲ | 50,000 |
| ಸೌಲಭ್ಯಗಳ ನಷ್ಟ | 10,000 | 10,000 | 20,000 |
| ಉದ್ದೇಶಿತ ಭವಿಷ್ಯ | ಇಲ್ಲ | 50,000 | 50,000 |
| **ಒಟ್ಟು** | **7,97,000** | **4,30,600** | **12,27,600** |

ತದನುಸಾರವಾಗಿ, ನಾನು ಈ ಮುಂದಿನ ಆದೇಶವನ್ನು ಹೊರಡಿಸಿದ್ದೇನೆ.

## ಆಜ್ಞೆ

ಈ ಅಪೀಲು ಭಾಗಶಃವಾಗಿ ಪುರಸ್ಕರಿಸಲಾಗಿದೆ. ಎಂವಿಸಿ ಸಂಖ್ಯೆ: 2075/2011ರಲ್ಲಿ ನ್ಯಾಯಾಧಿಕರಣವು ದಿನಾಂಕ: 17.10.2012ರಂದು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಈ ಮೂಲಕ ಮಾರ್ಪಡಿಸಲಾಗಿದೆ. ಅಪೀಲುದಾರ/ಕ್ಲೇಮುದಾರರಿಗೆ ಸಂದಾಯವಾಗಬೇಕಾದ ನಷ್ಟ ಪರಿಹಾರವನ್ನು 7,97,000/– ರೂಪಾಯಿಗಳಿಂದ 12,27,600 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಒಟ್ಟು ಹೆಚ್ಚಿಸಲಾದ ನಷ್ಟ ಪರಿಹಾರವು 4,30,600/– ರೂಪಾಯಿಗಳಾಗಿದೆ. ಹೆಚ್ಚಿಸಲಾದ ನಷ್ಟ ಪರಿಹಾರವು ವಾರ್ಷಿಕ ಶೇಕಡಾ 6ರ ಬಡ್ಡಿದರವನ್ನು ಹೊಂದಿರತಕ್ಕದ್ದು. ಮೊದಲ ಪ್ರತ್ಯರ್ಜಿದಾರನಾಗಿರುವ ನ್ಯಾಷನಲ್ ಇನ್‌ಶೂರೆನ್ಸ್ ಕಂಪನಿ ಲಿಮಿಡೆಟ್, ಈ ತೀರ್ಪಿನ ಪ್ರಮಾಣೀಕೃತ ಪ್ರತಿಯಾಗಿ ಸ್ವೀಕೃತಿಯ ದಿನಾಂಕದಿಂದ ನಾಲ್ಕು ವಾರದೊಳಗಾಗಿ ನ್ಯಾಯಾಧಿಕರಣದ ಮುಂದೆ ಬಡ್ಡಿಯೊಂದಿಗೆ ಹೆಚ್ಚಿಸಲಾದ ನಷ್ಟ ಪರಿಹಾರದ ಮೊಬಲಗನ್ನು ಠೇವಣಿ ಇಡತಕ್ಕದ್ದು. ಇಡಲಾದ ಅಂಥ ಠೇವಣಿಯನ್ನು ಯುಕ್ತವಾದ ಕಾರ್ಯವಿಧಾನದ ಮೂಲಕ ಅಪೀಲುದಾರನಿಗೆ/ಕ್ಲೇಮುದಾರನಿಗೆ ಐತೀರ್ಪಿನ ನಿಬಂಧನೆಯಲ್ಲಿ ಹಂಚಿಕೆ ಮಾಡತಕ್ಕದ್ದು. ಸಂಬಂಧಪಟ್ಟ ನ್ಯಾಯಾಧಿಕರಣಕ್ಕೆ ಹದಿನೈದು ದಿನದೊಳಗಾಗಿ ಎಲ್‌ಸಿಆರ್ ಹಿಂದಿರುಗಿಸತಕ್ಕದ್ದು.

ತದನುಸಾರವಾಗಿ ಡಿಕ್ರಿಯನ್ನು ಈ ಕಚೇರಿ ವಿಲೇ ಮಾಡುವುದು.